# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 727

ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 18.08.2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ವಾರದಲ್ಲಿ 6 ದಿನ ಮೊಟ್ಟೆ ವಿತರಣೆ ಮಾಡುವ ಸರ್ಕಾರದ ಆದೇಶವನ್ನು ಎಲ್ಲಾ ಶಾಲೆಗಳಲ್ಲಿ ಸರಿಯಾದ ಅನುಷ್ಠಾನಗೊಳಿಸಲಾಗುತ್ತಿದೆಯೇ; (ಮಾಹಿತಿಯನ್ನು ಒದಗಿಸುವುದು) | ರಾಜ್ಯದಲ್ಲಿ 1 ರಿಂದ 10ನೇ ತರಗತಿಗಳಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡಿತ್ತಿರುವ ವಿದ್ಯಾರ್ಥಿಗಳಿಗೆ ವಾರದಲ್ಲಿ 06 ದಿನ ಮೊಟ್ಟೆ, ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಣೆ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. |
| ಆ) | ರಾಜ್ಯದ ಕೆಲವೊಂದು ಜಿಲ್ಲೆಗಳಲ್ಲಿ ಸರ್ಕಾರದ ಆದೇಶದನ್ವಯ 6 ದಿನ ಮೊಟ್ಟೆ ವಿತರಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಯಾವ ಯಾವ ಜಿಲ್ಲೆಗಳಲ್ಲಿ ಆರು ದಿನಗಳ ಕಾಲ ಮೊಟ್ಟೆ ವಿತರಣೆ ಮಾಡುತ್ತಿಲ್ಲ; (ಜಿಲ್ಲೆಯ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ 29 ಜಿಲ್ಲೆಗಳ 568 ಶಾಲೆಗಳಲ್ಲಿ ವಾರದಲ್ಲಿ 6 ದಿನ ಮೊಟ್ಟೆ ವಿತರಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಜಿಲ್ಲಾವಾರು ಶಾಲೆಗಳ ಸಂಖ್ಯೆಯ ಮಾಹಿತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. ಸದರಿ ಜಿಲ್ಲೆಗಳಲ್ಲಿ ವಾರದಲ್ಲಿ 6 ದಿನ ಪೋಷಕರ ಒಪ್ಪಿಗೆ ಪಡೆದು ಮೊಟ್ಟೆ, ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಿಸುವಂತೆ ಇಲಾಖೆಯ ವತಿಯಿಂದ ಜ್ಞಾಪನವನ್ನು ನೀಡಲಾಗಿದೆ. ಜೊತೆಗೆ ಮೇಲ್ವಿಚಾರಣಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರು, ಪೋಷಕರು ಮತ್ತು ಶಾಲಾ ಮುಖ್ಯಶಿಕ್ಷಕರೊಂದಿಗೆ ಚರ್ಚಿಸಿ ಸರ್ಕಾರದ ಆದೇಶದಂತೆ ವಾರದ 6 ದಿನವು ಪೋಷಕರ ಒಪ್ಪಿಗೆ ಪಡೆದು ಮೊಟ್ಟೆ, ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಿಸುವಂತೆ ಕ್ರಮಕೈಗೊಳ್ಳಲಾಗಿದೆ. |
| ಇ) | ಎಸ್.ಡಿ.ಎಂ.ಸಿ ಸೂಚನೆ ಮೇರೆಗೆ ಕೆಲವೆಡೆ 3 ದಿನ ಮೊಟ್ಟೆ ಮೂರು ದಿನ ಬಾಳೆಹಣ್ಣು ನೀಡಲಾಗುತ್ತಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಈ) | ಕೊಪ್ಪಳ ಜಿಲ್ಲೆಯ ಎಷ್ಟು ಶಾಲೆಗಳಲ್ಲಿ 6 ದಿನಗಳ ಕಾಲ ಮೊಟ್ಟೆ ವಿತರಣೆ ಮಾಡಲಾಗುತ್ತಿದೆ; ಎಷ್ಟು ಶಾಲೆಗಳಲ್ಲಿ 3 ದಿನ ಮೊಟ್ಟೆ 3 ಬಾಳೆಹಣ್ಣು ವಿತರಣೆ ಮಾಡಲಾಗುತ್ತಿದೆ; (ಮಾಹಿತಿಯನ್ನು ಒದಗಿಸುವುದು) | ಕೊಪ್ಪಳ ಜಿಲ್ಲೆಯ 1133 ಶಾಲೆಗಳಲ್ಲಿ ಇಲಾಖಾ ಆದೇಶದಂತೆ ಮೊಟ್ಟೆ ತಿನ್ನುವ ಮಕ್ಕಳಿಗೆ 6 ದಿನಗಳ ಕಾಲ ಪೋಷಕರ ಒಪ್ಪಿಗೆ ಪಡೆದು ಮೊಟ್ಟೆ, ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ವಿತರಣೆ ಮಾಡುತ್ತಿದೆ. 14 ಶಾಲೆಗಳಲ್ಲಿ ಮಾತ್ರ ಪೋಷಕರ ಒಪ್ಪಿಗೆ ಪಡೆದು ವಾರದಲ್ಲಿ 3 ದಿನ ಬಾಳೆಹಣ್ಣನ್ನು ವಿತರಣೆ ಮಾಡಲಾಗುತ್ತಿದೆ. |

| | | |
|---|---|---|
| ಉ) | ಸರ್ಕಾರದ ಆದೇಶ ಉಲ್ಲಂಘಿಸಿ ಮೊಟ್ಟೆ ವಿತರಣೆ ಮಾಡದೇ ಇರುವ ಶಾಲೆಗಳ ವಿರುದ್ಧ ಯಾವ ರೀತಿಯ ಶಿಸ್ತು ಕ್ರಮ ಜರುಗಿಸಲಾಗಿದೆ; ಈ ರೀತಿ ಉಲ್ಲಂಘನೆಯಾಗದಂತೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ? (ಮಾಹಿತಿ ಒದಗಿಸುವುದು) | ಸರ್ಕಾರದಿಂದ ಪೋಷಕರ ಒಪ್ಪಿಗೆಯ ಮೇರೆಗೆ ವಾರದಲ್ಲಿ 6 ದಿನ ಮೊಟ್ಟೆ ಅಥವಾ ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಣೆ ಮಾಡಲು ಮಾತ್ರ ಸೂಚನೆ ನೀಡಲಾಗಿದ್ದು, ವಾರದಲ್ಲಿ 6 ದಿನ ಮೊಟ್ಟೆಯನ್ನು ಕಡ್ಡಾಯವಾಗಿ ವಿತರಿಸಲು ಸೂಚನೆ ನೀಡಿರುವುದಿಲ್ಲ. ಪೋಷಕರು ಶಾಲೆಗಳ ಮುಖ್ಯಶಿಕ್ಷಕರಿಗೆ ನೀಡಿರುವ ಲಿಖಿತ ಒಪ್ಪಿಗೆಯಂತೆ ಸದರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ.<br>ಆದಾಗ್ಯೂ ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇಲಾಖೆಯ ವತಿಯಿಂದ ಜ್ಞಾಪನವನ್ನು ನೀಡಲಾಗಿದೆ. ಜೊತೆಗೆ ಮೇಲ್ವಿಚಾರಣಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರು, ಪೋಷಕರು ಮತ್ತು ಶಾಲಾ ಮುಖ್ಯಶಿಕ್ಷಕರೊಂದಿಗೆ ಚರ್ಚಿಸಿ ಸರ್ಕಾರದ ಆದೇಶದಂತೆ ವಾರದ 6 ದಿನವು ಪೋಷಕರ ಒಪ್ಪಿಗೆ ಪಡೆದು ಮೊಟ್ಟೆ, ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಿಸುವಂತೆ ಕ್ರಮಕೈಗೊಳ್ಳಲಾಗಿದೆ. |

ಇಪಿ 101 ಎಂಎಂಎಸ್ 2025

(ಎಸ್.ಮಧು ಬಂಗಾರಪ್ಪ)

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**

ಅನುಬಂಧ - 4.

| ವಾರದ 6 ದಿನಗಳು ಮೊಟ್ಟೆ ನೀಡಿರುವುದಿಲ್ಲವೆಂದು ವರದಿ ಬಂದಿರುವ ಜಿಲ್ಲೆಗಳ ವಿವರ | | |
|---|---|---|
| ಕ್ರ ಸಂ | ಜಿಲ್ಲೆಗಳ ಹೆಸರು | ಶಾಲೆಗಳ ಸಂಖ್ಯೆ |
| 1 | ಚಿಕ್ಕಬಳ್ಳಾಪುರ | 8 |
| 2 | ಬೆಂಗಳೂರು ದಕ್ಷಿಣ | 2 |
| 3 | ಬಳ್ಳಾರಿ | 3 |
| 4 | ಬೆಳಗಾವಿ | 7 |
| 5 | ಬೆಳಗಾವಿ / ಚಿಕ್ಕೋಡಿ | 6 |
| 6 | ಬೆಂಗಳೂರು ಗ್ರಾಮಾಂತರ | 56 |
| 7 | ಬೆಂಗಳೂರು ಉತ್ತರ | 6 |
| 8 | ಬೀದರ್ | 4 |
| 9 | ಚಾಮರಾಜನಗರ | 4 |
| 10 | ಚಿಕ್ಕಬಳ್ಳಾಪುರ | 74 |
| 11 | ಚಿತ್ರದುರ್ಗ | 12 |
| 12 | ದಕ್ಷಿಣ ಕನ್ನಡ | 37 |
| 13 | ದಾವಣಗೆರೆ | 4 |
| 14 | ಧಾರವಾಡ | 2 |
| 15 | ಹಾಸನ | 8 |
| 16 | ಹಾವೇರಿ | 1 |
| 17 | ಕೊಡಗು | 5 |
| 18 | ಕೋಲಾರ | 47 |
| 19 | ಕೊಪ್ಪಳ | 14 |
| 20 | ಮಂಡ್ಯ | 20 |
| 21 | ಮೈಸೂರು | 8 |
| 22 | ರಾಯಚೂರು | 36 |
| 23 | ರಾಮನಗರ | 2 |
| 24 | ಶಿವಮೊಗ್ಗ | 21 |
| 25 | ತುಮಕೂರು | 91 |
| 26 | ತುಮಕೂರು / ಮಧುಗಿರಿ | 41 |
| 27 | ಉಡುಪಿ | 18 |
| 28 | ಉತ್ತರ ಕನ್ನಡ | 10 |
| 29 | ವಿಜಯನಗರ | 21 |
| ಒಟ್ಟು | | **568** |